ಅಲವತ್ತುಕೊಳ್ಳುತ್ತ ಅತ್ತ ತಿರುಗಿದವರಿಗೆ ಅಸೋಸಿಯೇಶನ್ ಪ್ರೆಸಿಡೆಂಟ್ ಶಿವರಾಂ ಬರುವುದು ಕಾಣಿಸಿತು.

'ನಾವೆಷ್ಟು ಬಡಕೊಂಡ್ರು ಕೇಳೋದಿಲ್ಲ. ನೋಡಿ ಅಲ್ಲಿ, ಹಸಿಕಸದಲ್ಲಿ ಒಣಗಿದ್ದು, ಒಣಕಸದಲ್ಲಿ ಹಸೀದು ಹಾಕಿ ಸಾಯ್ತಾರೆ. ಇವನು ಕಸ ಒಯ್ಯೋದೇ ಇಲ್ಲ ಅಂತಿದಾನೆ. ಏನು ಮಾಡತೀರಾ ನೋಡಿ. ನಂಗಂತೂ ಈ ಸೆಕ್ರೆಟರಿ ಕೆಲಸಾನೇ ಬೇಡ.'

ಶಿವರಾಂ ಕಸದತ್ತಲೆ ಬರುತ್ತ, 'ಇವರಿಗೇನು ಮಾಡೋದಪ್ಪ? ಪ್ರತಿ ಮನೆ ಬಾಗಿಲಿಗೇ ಹೋಗಿ ಹತ್ತು ಸಾರಿ ಹೇಳಾಯ್ತು. ಹಸಿ ಮತ್ತು ಒಣ ಅಂತ ಬಾಯಿ ಬಡಕೊಂಡು ಲಿಸ್ಟೂ ಕೊಟ್ಟಾಯ್ತು. ಯರ‍್ರಯ್ಯಾ... ನಾವೇನೋ ಇದಕ್ಕೊಂದು ಮಾಡತೀವಿ. ಮುಂದೆ ಹೀಗಾಗಲ್ಲ. ಇದೊಂದ್ಸಾರಿ ತಗೊಂಡ್ಹೋಗಪ್ಪಾ...' ಅಂತ ರಾಜಿ ಪಂಚಾಯತಿಗಿಳಿದರು. ಯರ‍್ರಯ್ಯ ಟೆಂಪೊದಿಂದಿಳಿದು ಬಂದು ಕಸದ ನಡುವೆ ಚಲಿಸುತ್ತಾ ಸಾಭಿನಯವಾಗಿ ಅಕ್ರಮಗಳ ತುತ್ತೂರಿಯೂದತೊಡಗಿದ. ಕಸದ ಹೆಣನಾತ ಮತ್ತವನ ಕೊರೆತದೆದುರು, ಅಪಾರ್ಟ್‌ಮೆಂಟಿನವರ ದಿವ್ಯ ಅಸಡ್ಡೆ ತಂದಿಟ್ಟ ಈ ಅಸಹಾಯ ಸ್ಥಿತಿಗೆ ಮೈ ಪರಚಿಕೊಳ್ಳುವಂತಾಗಿ ಹೇಗೋ ಒಮ್ಮೆ ಕೊಡವಿಕೊಳ್ಳುವ ಧೋರಣೆಗೆ ಬಂದರು. ಯರ‍್ರಯ್ಯನಿಗೆ ಎರಡುನೂರು ನಗದು ಕೊಟ್ಟಮೇಲೂ 'ಮುಂದಿನ್ಸಾರಿ ಹೀಗೇ ಇದ್ರೆ ನಾ ಖಂಡಿತಾ ಬರಲ್ಲ' ಅಂತ ಶಪಥ ಮಾಡಿ ಡ್ರಮ್ಮುಗಳಿಗೆ ಕೈ ಹಾಕಿದ.

ಲಿಫ್ಟು ಬಾಗಿಲು ತೆರೆದುಕೊಂಡು ಬೆನ್ನಿಗೆ ಬೇತಾಳಬ್ಯಾಗು ಏರಿಸಿಕೊಂಡ ಶರತ್ ಹೊರಬಂದ. ಟಕ್ ಅಂತ ಹಿಂಗಾಲಲ್ಲಿ ಬಾಗಿಲನ್ನು ಒದ್ದು ಮುಚ್ಚಿ ಬೈಕಿನತ್ತ ಹೋಗತೊಡಗಿದ. 'ಏ ಶರತ್... ಲಿಫ್ಟ್ ಬಾಗಿಲನ್ನ ಒರಟಾಗಿ ಹ್ಯಾಂಡಲ್ ಮಾಡಬಾರದಪ್ಪಾ. ನಿನ್ನೆಯಷ್ಟೆ ರಿಪೇರಿಯಾಗಿದೆ.'

'ಅಂಕಲ್, ಬಾಗಿಲ ಸ್ಪ್ರಿಂಗು ಹೋಗಿದೆ ಅನ್ಸುತ್ತೆ. ಅದಾಗೆ ಮುಚ್ಕೊಳಲ್ಲ. ಅತ್ಲಾಗಿ ಆಟೋಮೆಟಿಕ್ ಲಿಫ್ಟ್ ಹಾಕಿಸ್ಬಿಡಿ. ಕಿರಿಕಿರಿಯಿರಲ್ಲ' ಬೈಕ್ ಹತ್ತಿ ಹೊರಟುಹೋದವನ ಕಡೆಯೇ ದಿಟ್ಟಿಸಿದರು.

ಕನಕಾದೇವಿ ಕಡೆ ತಿರುಗಿ, 'ಹೌದು, ಬಿಲ್ಡರು ಯಾವುದೊ ಗತಿಗೆಟ್ಟ ಕಂಪೆನಿ ಲಿಫ್ಟ್ ಹಾಕಿ ಕೈ ತೊಳಕೊಂಡಿದಾನೆ. ಆಟೋಲಿಫ್ಟು ಏನು ಕಲಾಸಿಪಾಳ್ಯದ ಗುಜರಿ ಅಂಗಡೀಲಿ ಸಿಗುತ್ತಾ? ಪ್ರತಿ ಫ್ಲ್ಯಾಟಿನವರೂ ಮೂವತ್ತು ಸಾವ್ರ ಕೊಡೋ ಹಾಗಿದ್ರೆ ಹೇಳಲಿ!' ಅಂದರು. ಇರೋ ನಲವತ್ತು ಫ್ಲ್ಯಾಟುಗಳ ಪೈಕಿ ಹತ್ತರಲ್ಲಿ ಬಾಡಿಗೆಯವರಿದ್ದಾರೆ. ಉಳಿದೆಲ್ಲದರಲ್ಲಿ ಇರೋದು ಮಾಲೀಕರೆ. ನಾಲ್ಕಾರು ಜನ ಬ್ಯಾಂಕು ಮತ್ತು ಸರಕಾರಿ ಇಲಾಖೆಗಳ ನಿವೃತ್ತ ಅಧಿಕಾರಿಗಳು. ಕನಕಾದೇವಿ ಹೈಸ್ಕೂಲು ಟೀಚರಾಗಿ ನಲವತ್ತೈದಕ್ಕೆ ಸ್ವಯಂ ನಿವೃತ್ತಿ ಪಡೆದವರು. ಐದು ಜನ ಸ್ಟೇಷನರಿ ಮತ್ತು ಕಿರಾಣಿ ಅಂಗಡಿ ಇಟ್ಟುಕೊಂಡವರು. ಉಳಿದವರಲ್ಲಿ ಹೊಸದಾಗಿ ಮದುವೆಯಾದವರಿಂದ ಹಿಡಿದು ಶಾಲೆ ಹೈಸ್ಕೂಲಿಗೆ ಹೋಗುವ ಮಕ್ಕಳಿರುವ ಪ್ರಾಯದವರೆಗಿನವರಿದ್ದಾರೆ. ಎಂಜಿನಿಯರು, ಲೆಕ್ಕಪತ್ರ ವಿಭಾಗದಲ್ಲಿ ಕೆಲಸ ಮಾಡುವವರು, ಕಾಲೇಜು ಉಪನ್ಯಾಸಕರು ಅಂತ ವೃತ್ತಿ ವೈವಿಧ್ಯದವರು ಇದ್ದಾರೆ. ಎಲ್ಲ ತಿಳಿವಳಿಕೆಯುಳ್ಳವರೇ. ಆದರೇಕೆ ತಮಗೆ ನಿರ್ವಹಣೆ ಮಾಡಲಾಗುತ್ತಿಲ್ಲ? ಮನುಷ್ಯ ಸಂಘ ಜೀವಿಯಾಗಿದ್ದಕ್ಕೆ ಇಷ್ಟು ವಿಕಾಸ ಹೊಂದಿದ ಅಂತ ಓದಿದ್ದರು. ಆದರಿಲ್ಲಿ ತಮ್ಮ ಮನೆ ಬಿಟ್ಟು ಯಾರನ್ನು ಯಾರೂ ಲಕ್ಷಿಸುವಂತೆ ಕಾಣುತ್ತಿಲ್ಲ. ಬೇಸ್ಮೆಂಟು, ಲಿಫ್ಟು, ನೀರು, ಕಾರಿಡಾರ್ ದೀಪ ಯಾರಪ್ಪನ ಗಂಟು ಅನ್ನೋಹಾಗೆ ವರ್ತಿಸುತ್ತಾರೆ. ಒಬ್ಬನ ವ್ಯಕ್ತಿತ್ವ ಪ್ರಕಟವಾಗುವುದು ನಾಲ್ಕು ಜನರೆದುರು ಆತ